ಮರಿಗಳಾದರೂ ಮಳೆ ಬಂದಾಗಲೆಲ್ಲ ಹಂದಿ ಮರಿ ನೆನೆಸುತ್ತದೆ.

ಮಳೆಯದ್ದೊಂದು ಪರಿಪಾಠ. ಕಾಣದ ಕಡಲಿಗೆ ಹಂಬಲಿಸಬೇಕು. ಉರಿಗೆ ಮೈ ಸುಟ್ಟುಕೊಳ್ಳಬೇಕು. ಸುಟ್ಟು ನಿಟ್ಟುಸಿರು ಬಿಟ್ಟು ಆವಿಯಾಗಿ ರೂಪ ಕಳೆದುಕೊಳ್ಳಬೇಕು. ಆಖಾಡ ಆಗಸದ ಅಂಗಳ ಸೇರಿ ತಂಪೇರಿಸಿಕೊಂಡರೆ ಮಾತ್ರ ಜಿನುಗುವ ಮಳೆಯಾಗುವ ದೆಸೆ. ವೈಜ್ಞಾನಿಕವಾಗಿ ಏನೇ ಇರಲಿ, ಅಮ್ಮನ ದೃಷ್ಟಿಯಲ್ಲಿ ಮಳೆ ಹೆಣ್ಣುಮಗಳಂತೆ. ಮುಗಿಲು ಗಂಡನ ಮನೆ. ಮುಗಿಲೇರುವಾಗ ಸದ್ದಿಲ್ಲ. ಇಳಿಯುವಾಗ ಗಿಲಿಗಿಲ್ ಗೆಜ್ಜೆ ಸಪ್ಪಳ. ರಪರಪ ಧೋಧೋ ಜಲಕ್ ಜಲಕ್ ಓಡೋಡಿ ಬರುತ್ತಾಳಂತೆ. ಮೊದಲ ಬಾರಿಗೆ ಗಂಡನ ಮನೆಗೆ ಹೋಗುವಾಗ ಕಾಲು ಕದಲುವುದಿಲ್ಲ. ತವರ ನೆನಪಾದರೆ ಮಳೆಯದೇ ಅಂತಃಕರಣ. ಅಲ್ಲಿಂದಿಲ್ಲಿಗೆ ಇಲ್ಲಿಂದ ಮತ್ತೆಲ್ಲಿಗೆ ಪಯಣ?.

ನೀರು ಸುರಿಸುವ ನೀರೆಯೇ ಮಳೆ... ಒಮ್ಮೆ 'ಪ್ರಜಾವಾಣಿ'ಯ ಬಣ್ಣದ ತಗಡಿನ ತುತ್ತೂರಿಯಲ್ಲಿ 'ಮಳೆಯಾದಳು ನೀರಾ' ಕಥೆ ಪ್ರಕಟವಾಯಿತು. ಆಕಾಶದಿಂದ ಇಳಿವ ಗಂಗೆಯಂತೆ ಚಂದದ ಬಣ್ಣದ ಚಿತ್ರ. ಬಣ್ಣವೆಂದರೆ ಮರುಳಾಗದವರು ಯಾರು ಹೇಳಿ? ನಾನೂ ಮರುಳಾದೆನೆನ್ನಿ. ಕಥೆ ಪ್ರಕಟವಾಗಿದ್ದಕ್ಕೆ ಕಾಲು ನೆಲತಾಕಲಿಲ್ಲ. ಅದೇ ದಿನ ಬೇರೆ ಆಫೀಸಿಗೆ ಮೀಟಿಂಗ್‌ಗೆ ಹೋದೆ. ಇದ್ದವರಿಗೆಲ್ಲ ಎದ್ದು ಬಿದ್ದು ತೋರಿಸಿದೆ. ಎಲ್ಲರೂ ಸಂಭ್ರಮಿಸಿದರು. ಊಟ ಮಾಡಿ ಬರುವಷ್ಟರಲ್ಲಿ ಕಥೆ ಪ್ರಕಟವಾದ ಪೇಪರ್ ಕಾಣೆಯಾಗಿತ್ತು. ಅಲ್ಲಿದ್ದ ಸ್ನೇಹಿತೆಯೊಬ್ಬರನ್ನು ಕೇಳಿದೆ. ಅದೇನು ಬೆಳ್ಳಿಯೋ ಬಂಗಾರವೋ ಬಡಕೊಳ್ಳಾಕ. ಯಕಃಶ್ಚಿತ ಪೇಪರ್...! ಮುಖ ಸಿಂಡರಿಸಿದರು. ಹೇಗೆ ತಿಳಿಸಲಿ ಒಬ್ಬ ಲೇಖಕರಿಗೆ ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟವಾದ ಸಣ್ಣ ಸಾಲು ಬೆಲೆ ಕಟ್ಟಲಾಗದ ಬಂಗಾರವೆಂದು. ಹುಡುಕಿದಾಗ ಮಳೆಯಲ್ಲಿ ತೋಯಿಸಿಕೊಂಡ ಗುಬ್ಬಿ ಮರಿಯಂತೆ ಪೇಪರ್ ಬಿದ್ದಿತ್ತು. ಊಟಕ್ಕೆ ಬಳಸಿ ಬಿಸಾಕಿದ್ದಳು ಸ್ನೇಹಿತೆ. ಎತ್ತಿ ತಂದು ಕೊಳೆಯಾದರೂ ವ್ಯಾನಿಟಿ ಬ್ಯಾಗಿನಲ್ಲಿ ತುರುಕಿ ಕೊಳ್ಳುತ್ತಾ, ಹೊರಗಿನ ಕೊಳೆ ತೊಳೆವ ಮಳೆ, ಒಳಗಿನ ಕೊಳೆಯನ್ನೂ ತೊಳೆಯಲೆಂದು ಬೇಡಿದೆ ಅಷ್ಟೇ.

ತಾತನ ಕಣ್ಣಿಗೆ ರೋಹಿಣಿ ಬಲು ಚೆಲುವೆ, ನಮ್ಮಜ್ಜಿ. ನಮ್ಮಜ್ಜ ತಮ್ಮಣ್ಣಪ್ಪ ಪಂಚಾಂಗ ಹಿಡಿದು ಬೆರಳುಗಳನೆಣಿಸಿ ಮಳೆ ಬರುವ ಲೆಕ್ಕಾಚಾರಕ್ಕೆ ಕುಳಿತು ಕೊಳ್ಳಲು ಕಾರಣ, ಮಳೆ ನಂಬಿ ನೇಗಿಲ ಹೂಡಿ ಬಂದ ಹೊಲ ಹುಲುಸಾಗಲಿ ಮಕ್ಕಳು ಮರಿಗಳು ಉಪವಾಸ ಬೀಳದಿರಲಿ ಎಂದಾಗಿತ್ತು. ಅಜ್ಜಿ ನೀಲಗಂಗಮ್ಮನದು ಮಳೆ ಬರುವ ಮುಂಚೆ ಕುಳ್ಳು ಕಟ್ಟಿಗೆಯನು ಕೂಡಿಡುವ ಚಿಂತಿ. ಪಡಿ ರೊಟ್ಟಿ ಬಡಿಯಲು ಒಣ ಕಟ್ಟಿಗೆ ಜೋಪಾನ ಮಾಡಿ. ಕುಳ್ಳಿಗೆ ಕವಚ ಹಾಕಿ ಮಳೆಗೆ ಸಿಕ್ಕದಂತೆ ಎತ್ತಿಕ್ಕುವಲ್ಲಿ ಅಜ್ಜಿ ಜಾಣೆ. ಮಳೆಯ ಮೇಳಕೂ ಅಜ್ಜಿಯ ಪದಕೂ ತಾಳಮೇಳ. ಜನಪದವೋ ಭಾವಗೀತೆಯೋ, ಯುಗಳ ಗೀತೆಯೋ ನೂರೆಂಟು ಮಳೆಕವಿತೆಗಳು ಕನ್ನಡಮ್ಮನ ಮಡಿಲಲ್ಲಿ.

ಹಾಗೇ ಹತ್ತಾರು ಗಾದೆಗಳು. 'ಅಶ್ವಿನಿ ಮಳೆ ಬಿದ್ದರೆ ಹಸುವಿನ ಹಾಲಿಲ್ಲ' ಎಂಬುದೊಂದು ಗಾದೆ. ಈ ಘಟನೆ ಆಗಿ ಐದಾರು ದಶಕವೇ ಸಂದಿವೆ. ಗುರವ್ವಜ್ಜಿ ಮನೆಪಕ್ಕದವಳು. ಹತ್ತಾರು ದೇವರಿಗೆ ಹರಕೆ ಹೊತ್ತು ಹಡೆದದ್ದು ಗಂಡು. ಆದರೆ ಆಕೆಯ ಎದೆ ಬತ್ತಿ ಬತ್ತಿಯಾಗಿತ್ತು. ಗುದ್ದಲಿಗೆ ಕಟ್ಟಿದ ಹುಸುವಿನ ಕೆಚ್ಚಲಲ್ಲೂ ಹಾಲಿಲ್ಲ. ಆಗ ನನ್ನ ಇನ್ನೊಬ್ಬ ಅಮೃತಮ್ಮಜ್ಜಿಯೂ ಕೂಸಿನ ತಾಯಿ. ಅಮೃತಮ್ಮಜ್ಜಿ ಗುರವ್ವಜ್ಜಿ ಮಗನಿಗೂ ಹಾಲೂಣಿಸಿ ಪೊರೆದ ಯಶೋದಾಳೆಂದು ಹೇಳುತ್ತಿದ್ದರೆ, ಜಗದ ಮಕ್ಕಳೆಲ್ಲಾ ತನ್ನ ಮಕ್ಕಳೆಂದೇ ಪೊರೆವ ಸಂತತಿ ಸಾವಿರವಾಗಲಿ ಎಂದು ಅಶ್ವಿನಿ ದೇವತೆಯಂತೆ ಕಂಡ ಅಜ್ಜಿಗೆ ಕೈ ಮುಗಿದೆ ಅಷ್ಟೇ.

ಬೀಳುವ ಮಳೆಗಳಲ್ಲೂ ಎಷ್ಟೊಂದು ಪ್ರಕಾರ. ತುಂತುರು ಮಳೆ, ಜೋರು ಮಳೆ, ಜಡಿ ಮಳೆ, ಆಲಿಕಲ್ಲು ಮಳೆ, ಜಲ ಪ್ರಳಯ ಮಳೆ, ನೆರೆ ತರುವ ಮಳೆ, ಹನಿಸುವ ಮಳೆ, ನೆನೆಸುವ ಮಳೆ, ಕುಂಭವೃಷ್ಟಿ, ಸೆಂಟಿ ಮೀಟರ್ ಮಳೆ, ಅಂಗುಲದ ಅಳತೆಯ ಮಳೆ, ಅಳತೆಗೆ ಸಿಕ್ಕುವ ಮಳೆ, ಸಿಗದಿರುವ ಮಳೆ.

ಇಂಥದ್ದೇ ಅಳತೆಗೆ ಸಿಗದ ಮಳೆಗೆ ಸಿಕ್ಕವಳು ಶಂಕ್ರಮ್ಮ. ಸಂಬಂಧದಲ್ಲಿ ಚಿಕ್ಕಮ್ಮ. ಅವಳಪ್ಪ ಗ್ರಾಮೋದ್ಯೋಗದಲ್ಲಿ ಮ್ಯಾನೇಜರ್. ಕುಟುಂಬ ಯೋಜನಾ ಶಸ್ತ್ರಚಿಕಿತ್ಸೆಗೆ ಬಾಂಬೆಗೆ ಹೋದ. ಏನಾಯಿತೋ ಅಲ್ಲೇ ಹೆಣವಾದ. ಅವನೊಂದಿಗೆ